# Committee formed to look into seat blocking in medical colleges

STAFF REPORTER
BENGALURU

The State government has constituted a committee to deliberate upon the issue of seat blocking in medical colleges.

At a press conference on Wednesday, Higher Education Minister C.N. Ashwath Narayan said the committee will be headed by S. Sacchidanand, Vice-Chancellor of RGUHS. The government's move comes in the wake of the medical seat-blocking scam which came to light during the I-T raid on two prominent deemed-to-be medical universities.

The Minister said the committee would submit a report in a week and it was scheduled to meet on Thursday.

Dr. Narayan also said the Department of Medical Education plans to introduce virtual clinic at five select primary health centres on pilot basis to tackle the shortage of specialists. Under this facility, doctors will address the concerns of patients by sitting in another location. The clinics would be functional in the next six months at Raichur, Yadgiri, Molakalmuru, Shikaripura, and Magadi. It will be undertaken by RGUHS.

### ಐದು ಕಡೆಗಳಲ್ಲಿ ವರ್ಚುಯಲ್ ಕ್ಲಿನಿಕ್ ಸೇವೆ ಆರಂಭಿಸಲು ನಿರ್ಧಾರ

# ಮೆಡಿಕಲ್ ಸೀಟ್ ಬ್ಲಾಕ್ ತಡೆಗೆ ಸಮಿತಿ

■ ವಿಕ ಸುದ್ದಿಲೋಕ ಬೆಂಗಳೂರು

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವೈದ್ಯ ಸೀಟುಗಳ ಬ್ಲಾಕ್ ದಂಧೆಗೆ ಕಡಿವಾಣ ಹಾಕಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ವಾರದಲ್ಲಿ ವರದಿ ಸಲ್ಲಿಸಲಿದೆ.

ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಖಾತೆ ವಹಿಸಿಕೊಂಡು 100 ದಿನಗಳ ಆಡಳಿತ ಪೂರೈಸಿದ ಹಿನ್ನೆಲೆಯಲ್ಲಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಸಿಎಂ ಡಾ. ಅಶ್ವತ್ಥನಾರಾಯಣ ಅವರು, ''ಆರ್‌ಜಿಯುಎಚ್‌ಎಸ್ ವಿಸಿ ಡಾ.ಎಸ್.ಎಸ್. ಸಚ್ಚಿದಾನಂದ ನೇತೃತ್ವದ ಸಮಿತಿಯು ಗುರುವಾರ ಸಭೆ ಸೇರಲಿದ್ದು, ಇನ್ನೊಂದು ವಾರದೊಳಗೆ ವರದಿ ಸಲ್ಲಿಸಲಿದೆ. ಖಾಸಗೀಯ ವೈದ್ಯಕೀಯ ಕಾಲೇಜುಗಳಲ್ಲಿ ವೈದ್ಯ ಸೀಟುಗಳನ್ನು ಬ್ಲಾಕ್ ಮಾಡುವುದಕ್ಕೆ ಹೇಗೆ ಕಡಿವಾಣ ಹಾಕಬಹುದು ಎಂಬ ಬಗ್ಗೆ ಸಲಹೆ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ. ಸಮಿತಿ ನೀಡುವ ವರದಿ ಆಧರಿಸಿ ಮುಂದಿನ ವರ್ಷದಿಂದ ವೈದ್ಯ ಸೀಟು ಬ್ಲಾಕ್ ದಂಧೆಯನ್ನು ನಿಯಂತ್ರಿಸಲು ಸರಕಾರ ಕ್ರಮ ಕೈಗೊಳ್ಳಲಿದೆ'' ಎಂದರು.

ಖಾಸಗಿ ವೈದ್ಯ ಕಾಲೇಜುಗಳಲ್ಲಿ ಹೊರ ರಾಜ್ಯಗಳ ವಿದ್ಯಾರ್ಥಿಗಳನ್ನು ಬಳಸಿಕೊಂಡು ಸೀಟ್ ಬ್ಲಾಕ್ ಮಾಡುವ ಮೂಲಕ ಮಾರಾಟ ಮಾಡುವ ದಂಧೆ ಕುರಿತು 'ವಿಜಯ ಕರ್ನಾಟಕ' ಇತ್ತೀಚೆಗೆ ಸರಣಿ ವರದಿಗಳನ್ನು ಪ್ರಕಟಿಸಿತ್ತು.

**5 ಕಡೆಗಳಲ್ಲಿ ವರ್ಚುಯಲ್ ಕ್ಲಿನಿಕ್ ಸೇವೆ:** ಈ ನಡುವೆ, ''ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಗ್ರಾಮೀಣ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸಲು ರಾಯಚೂರು, ಯಾದಗಿರಿ, ಮೊಳಕಾಲ್ಮೂರು, ಶಿಕಾರಿಪುರ ಹಾಗೂ ಮಾಗಡಿಯಲ್ಲಿ ಪ್ರಾಯೋಗಿಕವಾಗಿ ವರ್ಚುಯಲ್ ಕ್ಲಿನಿಕ್ ಸೇವೆ ಪ್ರಾರಂಭಿಸಲಾಗುವುದು'' ಎಂದು ಡಿಸಿಎಂ ತಿಳಿಸಿದರು.



ಬೆಂಗಳೂರಿನಲ್ಲಿ ಬುಧವಾರ ನಡೆದ ನಾನಾ ಇಲಾಖೆಗಳ ಸಾಧನೆಯ ಸಮಾರಂಭವನ್ನು ಸಿಎಂ ಯಡಿಯೂರಪ್ಪ ಉದ್ಘಾಟಿಸಿದರು. ಡಿಸಿಎಂ ಅಶ್ವತ್ಥನಾರಾಯಣ ಇದ್ದರು.

## ಡಿಸಿಎಂಗೆ ಸಿಎಂ ಶಹಭಾಸ್‌ಗಿರಿ

''ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಖಾತೆ ನಿರ್ವಹಿಸುತ್ತಿರುವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಅತ್ಯಂತ ಪ್ರಾಮಾಣಿಕ ಸಚಿವರು. ಇದೇ ಮಾದರಿಯಲ್ಲಿ ಬೇರೆಲ್ಲಾ ಸಚಿವರೂ ಕೆಲಸ ಮಾಡಬೇಕೆಂಬುದು ನನ್ನ ಅಪೇಕ್ಷೆಯಾಗಿದೆ'' ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ಡಿಸಿಎಂಗೆ ಶಹಭಾಸ್‌ಗಿರಿ ನೀಡಿದರು. ''1.45 ಗಂಟೆ ಕಾರ್ಯಕ್ರಮ ನಡೆಸಿದ್ದು ಸರಿಯಲ್ಲ. ಇನ್ನೇನಿದ್ದರೂ 1 ಗಂಟೆ ಅವಧಿಗೆ ಕಾರ್ಯಕ್ರಮ ಸೀಮಿತಗೊಳಿಸಿ. ಉನ್ನತ ಶಿಕ್ಷಣದ ಬಗ್ಗೆ ಆಸಕ್ತಿಯಿರುವ ಎಲ್ಲರೂ ಸರಕಾರಕ್ಕೆ ಸೂಕ್ತ ಸಲಹೆ- ಮಾರ್ಗದರ್ಶನ ನೀಡಬಹುದು. ಅದನ್ನು ಅಳವಡಿಸಿಕೊಳ್ಳುತ್ತೇವೆ. ಸಾಧನೆ ಮಾತನಾಡಬೇಕು, ಕೇವಲ ಮಾತೇ ಸರಕಾರದ ಸಾಧನೆಯಾಗಬಾರದು. ಕೇವಲ ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣವಲ್ಲದೆ ಎಲ್ಲ ಕ್ಷೇತ್ರಗಳಲ್ಲೂ ಗಣನೀಯ ಸಾಧನೆಯಾಗಬೇಕೆಂಬುದು ಸರಕಾರದ ಗುರಿಯಾಗಿದೆ'' ಎಂದರು.

## ಸಿಎಂ ವಿಷಾದ

''ರಾಜ್ಯದ ಜನರ ತೆರಿಗೆ ಹಣದಿಂದ ಸರಕಾರ ವೈದ್ಯಕೀಯ ಕಾಲೇಜುಗಳನ್ನು ನಿರ್ಮಿಸಿ, ಎಂಬಿಬಿಎಸ್ ವಿದ್ಯಾರ್ಥಿಗಳನ್ನು ಸೃಷ್ಟಿಸಿದರೆ ಕಿರಿಯ ವೈದ್ಯರು ನಂತರ ತಾಲೂಕು ಆಸ್ಪತ್ರೆಗಳಿಗೂ ತೆರಳಿ ಸೇವೆ ಸಲ್ಲಿಸಲು ಸಿದ್ಧರಿಲ್ಲದಿರುವುದು ಅತ್ಯಂತ ನೋವಿನ ಸಂಗತಿ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ವಿಷಾದ ವ್ಯಕ್ತಪಡಿಸಿದರು.

''ನಮ್ಮವರಿಗೆ ಹೊರ ದೇಶದ ಹುಚ್ಚು ಹಿಡಿದಿದೆ. ಇದರಿಂದ ನಮ್ಮತನ ಮರೆಯುತ್ತಿದ್ದೇವೆ. ವಿದೇಶಿ ವ್ಯಾಮೋಹದಿಂದ ನಾಡಿನ ಋಣ ತೀರಿಸಲು ಯುವ ವೈದ್ಯರು ಮುಂದೆ ಬರುತ್ತಿಲ್ಲ. ಇದರಿಂದ ಗ್ರಾಮೀಣ ಜನರಿಗೆ ನಿರೀಕ್ಷಿತ ವೈದ್ಯಕೀಯ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಎಷ್ಟೇ ಸಂಬಳ ಕೇಳಿದರೂ ಕನಿಷ್ಠ ನಿವೃತ್ತ ವೈದ್ಯರ ಸೇವೆಯನ್ನಾದರೂ ಬಳಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ'' ಎಂದು ಸಿಎಂ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

## ರಕ್ತಹೀರುವ ವೈದ್ಯರು

''ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮದ ನಂತರ 50 ರೋಗಿಗಳನ್ನು ಮಾತನಾಡಿಸಿದೆ. ಆದರೆ, ವೈದ್ಯರು ನಮ್ಮ ರಕ್ತ ಹೀರುತ್ತಿದ್ದಾರೆ ಎಂದು 25 ಮಂದಿ ರೋಗಿಗಳು ದೂರಿದರು. ಇದರಿಂದ ವ್ಯವಸ್ಥೆಯನ್ನು ಹೇಗೆ ಸುಧಾರಿಸಲು ಸಾಧ್ಯ ? ವೈದ್ಯರು ಜನರ ಪ್ರೀತಿ-ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಕೆಲಸ ಮಾಡಬೇಕು'' ಎಂದು ಯಡಿಯೂರಪ್ಪ ತಾಕೀತು ಮಾಡಿದರು. ''ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸ್ಟೈಫಂಡ್ ಮೊತ್ತ ಹೆಚ್ಚಿಸುವ ಕುರಿತು ಮುಂದಿನ ಬಜೆಟ್‌ನಲ್ಲಿ ಘೋಷಿಸಲು ಪ್ರಯತ್ನ ನಡೆಸಲಾಗುವುದು'' ಎಂದು ಸಿಎಂ ಭರವಸೆ ನೀಡಿದರು.